# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸು ಬಡಾವಣೆ ಟಮಕ, ಕೋಲಾರ-563 103

---

ಸಂಖ್ಯೆ: ಬೆಂ.ಉ.ವಿವಿ/ಕು.ಸ.ಕಾ/ಸಂ.ನ/1357/2023-24 ದಿನಾಂಕ:-12.09.2023

**ಅಧಿಸೂಚನೆ**

**ವಿಷಯ** : 2023-24ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಿಸುವ ಬಗ್ಗೆ.

**ಉಲ್ಲೇಖ:** 1. ಸಾಮಾನ್ಯ ವಿದ್ಯಾವಿಷಯಕ ಪರಿಷತ್ತು ಸಭೆಯ ನಡಾವಳಿ. ದಿನಾಂಕ: 14.07.2023
2. ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ ದಿನಾಂಕ: 15.07.2023
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 11.09.2023

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ 59ನೇ ಪ್ರಕರಣದ 17ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಸಕ್ಷಮಪ್ರಾಧಿಕಾರಗಳ ಅನುಮೋದನೆಯೊಂದಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು 2023-24ನೇ ಶೈಕ್ಷಣಿಕ ಸಾಲಿಗೆ **ಆರ್ಮಿ ಇನ್ಸಿಟಿಟ್ಯೂಟ್ ಆಫ್ ಹೋಟಲ್ ಮ್ಯಾನೇಜ್ಮೆಂಟ್ ಅಂಡ್ ಕ್ಯಾಟರಿಂಗ್ ಟೆಕ್ನಾಲಜಿ, ನಗರೇಶ್ವರ ನಾಗೇಹಳ್ಳಿ, ಕೊತ್ತನೂರು ಅಂಚೆ, ಬೆಂಗಳೂರು – 560 077.** ಇವರು ನಡೆಸುತ್ತಿರುವ ಕೆಳಕಂಡ ಕೋರ್ಸುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸಂಯೋಜನೆಯನ್ನು ನವೀಕರಿಸಿ ಮುಂದುವರಿಸಿದೆ.

| ಕೋರ್ಸ್ | ವಿಷಯ | ವಿದ್ಯಾರ್ಥಿ ಪ್ರಮಾಣ |
|---|---|---|
| ಬಿ.ಹೆಚ್.ಎಂ | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 60*+30 = 90 (ತೊಂಭತ್ತು) |

**(ಮೇಲ್ಕಂಡ ಕೋರ್ಸಿಗೆ 2020-21 ನೇ ಸಾಲಿನಿಂದ 2024-25ನೇ ಸಾಲಿನವರೆಗೆ 60 ವಿದ್ಯಾರ್ಥಿ ಪ್ರಮಾಣಕ್ಕೆ ಮಾತ್ರ ಐದು ವರ್ಷಗಳ ಅವಧಿಯ ಶಾಶ್ವತ ಸಂಯೋಜನೆ ಹೊಂದಿದೆ. ಸರ್ಕಾರದ ಆದೇಶ ಸಂಖ್ಯೆ:-ಇ-ಕಛೇರಿ ಸಂ: ಇಡಿ 214 ಯುಬಿವಿ 2021 ಬೆಂಗಳೂರು ದಿನಾಂಕ:- 05.07.2021)**

---

**ವಿ.ಸೂ:**

1. **ವಿಶ್ವವಿದ್ಯಾಲಯವು ಅನುಮೋದಿಸಿರುವ ಕೋರ್ಸುಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ-2020 ರ ಅನ್ವಯ ಶಿಸ್ತೀಯ ವಿಷಯಗಳನ್ನಾಗಿ ಮಾರ್ಪಾಡಿಸಿ ಪ್ರವೇಶಾತಿಯನ್ನು ವಿದ್ಯಾರ್ಥಿಪ್ರಮಾಣಕ್ಕೆ ಮೀರದಂತೆ ಮಾಡಿಕೊಳ್ಳತಕ್ಕದ್ದು.**
2. 2023-24ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಲಗತ್ತಿಸಿದೆ. ಕಾಲೇಜಿಗೆ ಸಿಂಡಿಕೇಟ್ /ಸ್ಥಳೀಯ ವಿಚಾರಣಾ ಸಮಿತಿ ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದೊಂದಿಗೆ ಮಾತ್ರ ಸಂಯೋಜನೆಯನ್ನು ನವೀಕರಿಸಲಾಗಿದೆ. ಕಾಲೇಜು 15 ದಿನಗಳ ಒಳಗಾಗಿ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ನಮೂದಿಸಿರುವ ಕೊರತೆಗಳನ್ನು ಸರಿದೂಗಿಸಿಕೊಂಡು ಉತ್ತಮ ಪಡಿಸಿಕೊಂಡಿರುವ ಬಗ್ಗೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಕುರಿತು ಅನುಸರಣಾ ವರದಿಯನ್ನು ನೀಡತಕ್ಕದ್ದು. ಇಲ್ಲವಾದಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನಾ ನವೀಕರಣದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.

---

**ಷರತ್ತುಗಳು:**

1. ಸ್ಥಳೀಯ ವಿಚಾರಣಾ ಸಮಿತಿಯು ನಮೂದಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.
2. **ಪ್ರತಿ ಶೈಕ್ಷಣಿಕ ವರ್ಷದಲ್ಲಿ ಬಿ.ಹೆಚ್.ಎಂ ಕೋರ್ಸಿಗೆ ಕಡ್ಡಾಯವಾಗಿ ಎ.ಐ.ಸಿ.ಟಿ.ಇ ಅನುಮೋದನೆಯನ್ನು ಹೊಂದಿರತಕ್ಕದ್ದು, ಇಲ್ಲವಾದಲಿ ವಿದ್ಯಾರ್ಥಿಗಳ ಪ್ರವೇಶವನ್ನು ಅನುಮೋದಿಸಲಾಗುವುದಿಲ್ಲ.**
3. ನಿಗದಿತ ವಿದ್ಯಾರ್ಥಿ ಪ್ರವೇಶ ಪ್ರಮಾಣವನ್ನು ಮೀರಿದ್ದಲ್ಲಿ ಹೆಚ್ಚುವರಿ ಪ್ರವೇಶ ಪ್ರಮಾಣಕ್ಕೆ ವಿಶ್ವವಿದ್ಯಾಲಯ ಅಂಗೀಕಾರ ನೀಡುವುದಿಲ್ಲ.
4. ಯಾವುದೇ ಕೋರ್ಸಿಗೆ/ಕೋರ್ಸುಗಳಿಗೆ ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಶಾಖೆಗಳನ್ನು ಹೆಚ್ಚಿಸಬಾರದು.
5. ಸದರಿ ಪದವಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕಲ್ಪಿಸುವಾಗ ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಮೀಸಲಾತಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
6. ವಿಶ್ವವಿದ್ಯಾಲಯವು, ಕಾಲೇಜಿನ ವಿದ್ಯಾರ್ಥಿಗಳು, ಬೋಧಕರು ಹಾಗೂ ಬೋಧಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ/ಪರಿನಿಯಮಾವಳಿ ಮತ್ತು ಆದೇಶಗಳನ್ನು ಕಾಲೇಜು ಪಾಲಿಸತಕ್ಕದ್ದು. ಕಾಲೇಜು, ವಿಶ್ವವಿದ್ಯಾಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ಮೀರದಂತೆ ಹಾಗೂ ವಿಶ್ವವಿದ್ಯಾಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.
7. ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ವಿಶ್ವವಿದ್ಯಾಲಯ ಕಾಲಕಾಲಕ್ಕೆ ನಿಗಧಿಪಡಿಸುವ ಪ್ರವೇಶ ಮತ್ತು ಇತರೆ ಶುಲ್ಕಗಳನ್ನು ಮೀರದಂತೆ, ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದ ಶೇಕಡಾ 50ರಂತೆ (ಸರ್ಕಾರಿ ಕಾಲೇಜುಗಳಿಗೆ ಶೇಕಡಾ 100ರಂತೆ) ವಿಶ್ವವಿದ್ಯಾಲಯವು ಪ್ರಾಯೋಜಿಸುವ ವಿದ್ಯಾರ್ಥಿಗಳಿಂದ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.